**Akashvani : Bangalore**
**Regional Bulletin In Kannada**
**26.04.2024 / 14.30 hrs**

**ಆಕಾಶವಾಣಿ ಬೆಂಗಳೂರು**

**ಪ್ರದೇಶ ಸಮಾಚಾರ**

**26.04.2024 / 14.30 hrs**

**<><*<><>*><>**

**ಮುಖ್ಯಾಂಶಗಳು**

**೧. ೧೪ ಜಿಲ್ಲೆಗಳಲ್ಲಿ ಶಾಂತಿಯುತ ಮತದಾನ ಪ್ರಗತಿಯಲ್ಲಿ - ಒಂದು ಗಂಟೆ ವರದಿಯಂತೆ ಒಟ್ಟಾರೆ ಶೇಕಡ ೩೮.೨೩ರಷ್ಟು ಮತದಾನ**

**೨. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿ ಹೆಚ್ಚು ಶೇಕಡ ೪೮.೧೦ ಯಷ್ಟು ಮತದಾನ ದಾಖಲು**

**೩. ವಿದ್ಯುನ್ಮಾನ ಮತಯಂತ್ರಗಳಲ್ಲಿ ದಾಖಲಾಗುವ ಪ್ರತಿಯೊಂದು ಮತವನ್ನೂ ವಿವಿಪ್ಯಾಟ್ ಚೀಟಿಯೊಂದಿಗೆ ಪರಿಶೀಲಿಸುವುದು ಅಸಾಧ್ಯ - ಸುಪ್ರೀಂಕೋರ್ಟ್ ತೀರ್ಪು**

**೪. ಒಳನಾಡು ಜಿಲ್ಲೆಗಳಲ್ಲಿ ಇನ್ನೂ ನಾಲ್ಕು ದಿನ ತೀವ್ರ ಬಿಸಿ ಗಾಳಿ- ಹವಾಮಾನ ಇಲಾಖೆಯ ಮುನ್ಸೂಚನೆ**

**೫. ಐಪಿಎಲ್ ಕ್ರಿಕೆಟ್: ಇಂದು ಕೊಲ್ಕತ್ತಾ ನೈಟ್ ರೈಡರ್ಸ್-ಪಂಜಾಬ್ ಕಿಂಗ್ಸ್ ಮುಖಾಮುಖಿ**

**<><*<><>*><>**

೧೮ನೇ ಲೋಕಸಭೆಗೆ ರಾಜ್ಯದಿಂದ ಪ್ರತಿನಿಧಿಗಳನ್ನು ಆಯ್ಕೆಮಾಡುವ ಸಲುವಾಗಿ ನಡೆದಿರುವ ಮತದಾನ ಪ್ರಕ್ರಿಯೆ ಬಿರುಸಿನಿಂದ ಮುಂದುವರಿಯುತ್ತಿದೆ. ಬೆಳಗ್ಗೆ ೭ ಗಂಟೆಗೆ ಆರಂಭವಾದ ಮತದಾನ ಕ್ರಮೇಣ ಚುರುಕುಗೊಂಡಿದೆ. ಮಧ್ಯಾಹ್ನ ೧ ಗಂಟೆಗೆ ಚುನಾವಣಾ ಆಯೋಗ ನೀಡಿರುವ ಮಾಹಿತಿಯಂತೆ ರಾಜ್ಯದಲ್ಲಿ ಶೇಕಡಾ ೩೮.೨೩ರಷ್ಟು ಮತದಾನವಾಗಿದೆ. ಅತಿ ಹೆಚ್ಚು ಮತದಾನ ಶೇಕಡ ೪೮.೧೦-ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಖಲಾಗಿದ್ದರೆ, ಅತಿ ಕಡಿಮೆ ಮತದಾನ ಶೇಕಡ ೩೦.೧೦, ಬೆಂಗಳೂರು ಕೇಂದ್ರ ಮತಕ್ಷೇತ್ರದಲ್ಲಿ ದಾಖಲಾಗಿದೆ. ಉಳಿದಂತೆ ಉಡುಪಿ-ಚಿಕ್ಕಮಗಳೂರು ಶೇಕಡಾ ೪೬.೪೩, ಹಾಸನ ೪೦.೯೯, ಚಿತ್ರದುರ್ಗ ೩೯.೦೫, ತುಮಕೂರು ೪೧.೯೧, ಮಂಡ್ಯ ೪೦.೭೦, ಮೈಸೂರು ೪೧.೫೮, ಚಾಮರಾಜನಗರ ೩೯.೫೭, ಬೆಂಗಳೂರು ಗ್ರಾಮಾಂತರ ೩೬.೦೯, ಬೆಂಗಳೂರು ಉತ್ತರ ೩೨.೨೫, ಬೆಂಗಳೂರು ದಕ್ಷಿಣ ೩೧.೫೧, ಚಿಕ್ಕಬಳ್ಳಾಪುರ ೩೯.೮೫ ಮತ್ತು ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಶೇಕಡ ೩೮.೪೨ರಷ್ಟು ಮತದಾನ ದಾಖಲಾಗಿದೆ. ಪ್ರಸ್ತುತ ಚುನಾವಣೆಯಲ್ಲಿ ಅಳಿಸಲಾಗದ ಶಾಹಿಯನ್ನು ಮತದಾರರ ಎಡಗೈ ತೋರು ಬೆರಳಿಗೆ ಹಚ್ಚಲಾಗುತ್ತಿದೆ. ಸಂಜೆ ೬ ಗಂಟೆಯವರೆಗೆ ಮತದಾನಕ್ಕೆ ಅವಕಾಶವಿರುತ್ತದೆ. ಮತದಾರರ ಪಟ್ಟಿಯಲ್ಲಿ ಹೆಸರು ದಾಖಲಾಗಿರುವ ಅರ್ಹ ಮತದಾರರು ಕೆಲವು ದಾಖಲೆಗಳನ್ನು ತೋರಿಸುವ ಮೂಲಕ ವೋಟ್ ಮಾಡಬಹುದು. ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಮನ್ರೇಗಾ ಜಾಬ್ ಕಾರ್ಡ್, ಬ್ಯಾಂಕ್, ಪೋಸ್ಟ್ ಆಫೀಸ್ ನೀಡಿರುವ ಭಾವಚಿತ್ರವಿರುವ ಪಾಸ್‌ಬುಕ್, ಆರೋಗ್ಯ ವಿಮಾ ಸ್ಮಾರ್ಟ್ ಕಾರ್ಡ್, ಪಾನ್ ಕಾರ್ಡ್, ಪಾಸ್‌ಪೋರ್ಟ್, ವಹಾನ ಚಾಲನೆ ಪರವಾನಗಿ ಭಾವಚಿತ್ರವಿರುವ ಪಿಂಚಣಿ ದಾಖಲೆ ಯುಡಿಐಟಿ ಕಾರ್ಡ್, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸಾರ್ವಜನಿಕ ಉದ್ದಿಮೆಗಳು ತಮ್ಮ ಉದ್ಯೋಗಿಗಳಿಗೆ ನೀಡಿರುವ ಭಾವಚಿತ್ರ ಸಹಿತ ಸೇವಾ ಗುರುತಿನ ಚೀಟಿ ಈ ಪೈಕಿ ಯಾವುದನ್ನಾದರೂ ತೋರಿಸುವ ಮೂಲಕವೂ ಮತದಾನಕ್ಕೆ ಅವಕಾಶ ಇರುತ್ತದೆ ಎಂದು ನಮ್ಮ ಬಾತ್ಮೀದಾರ ಎಚ್.ಆರ್. ಸುಧೀಂದ್ರ ವರದಿ ಮಾಡಿದ್ದಾರೆ.

೨೦೨೪ರ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಇಂದು ನಡೆದ ಮೊದಲ ಹಂತದ ಮತದಾನ ದಿನದ ವಿಶೇಷ ಮಾಹಿತಿಯನ್ನು ಒಳಗೊಂಡ ವಾರ್ತಾ ಸಂಚಿಕೆಯನ್ನು ಬೆಂಗಳೂರು ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗ ಇಂದು ರಾತ್ರಿ ೭.೪೫ ರಿಂದ ೮ ಗಂಟೆಯವರೆಗೆ ಪ್ರಸಾರ ಮಾಡಲಿದೆ.

**<><*<><>*><>**

ಇಂದು ಮತದಾನ ನಡೆದಿರುವ ಕರ್ನಾಟಕದ ೧೪ ಲೋಕಸಭಾ ಕ್ಷೇತ್ರಗಳಲ್ಲಿ ಒಟ್ಟು ೨೪೭ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇವರಲ್ಲಿ ೨೧ ಅಭ್ಯರ್ಥಿಗಳು ಮಹಿಳೆಯರಾಗಿದ್ದು, ೨೨೬ ಪುರುಷ ಅಭ್ಯರ್ಥಿಗಳಿದ್ದಾರೆ. ಕ್ಷೇತ್ರವಾರು ಅಭ್ಯರ್ಥಿಗಳ ಸಂಖ್ಯೆ ಈಗ ಹೇಳುವಂತಿದೆ. ಉಡುಪಿ-ಚಿಕ್ಕಮಗಳೂರು-೧೦, ಹಾಸನ-೧೫, ದಕ್ಷಿಣ ಕನ್ನಡ-೯, ಚಿತ್ರದುರ್ಗ-೨೦, ತುಮಕೂರು-೧೮, ಮಂಡ್ಯ-೧೪, ಮೈಸೂರು-೧೮, ಚಾಮರಾಜನಗರ-೧೪, ಬೆಂಗಳೂರು ಗ್ರಾಮಾಂತರ-೧೫, ಬೆಂಗಳೂರು ಉತ್ತರ-೨೧, ಬೆಂಗಳೂರು ಕೇಂದ್ರ-೨೪, ಬೆಂಗಳೂರು ದಕ್ಷಿಣ-೨೨, ಚಿಕ್ಕಬಳ್ಳಾಪುರ-೨೯, ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ೧೮ ಅಭ್ಯರ್ಥಿಗಳಿದ್ದಾರೆ. ಇಂದು ಚುನಾವಣೆ ನಡೆಯುತ್ತಿರುವ ೧೪ ಮತಕ್ಷೇತ್ರಗಳ ಪೈಕಿ ಕೆಲವು ಮತಗಟ್ಟೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳಲ್ಲಿ ಕೊಂಚ ಸಮಸ್ಯೆ ಎದುರಾದ ಕಾರಣ ಮತದಾನ ಪ್ರಕ್ರಿಯೆ ನಿಧಾನವಾಗಿದ್ದಾಗಿ ನಮ್ಮ ಪ್ರತಿನಿಧಿಗಳು ವರದಿ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಸಮೀಪದ ಮತಗಟ್ಟೆಯೊಂದರಲ್ಲಿ ಮತಗಟ್ಟೆ ಅಧಿಕಾರಿ ತಪ್ಪು ಬೆರಳಿಗೆ ಮಸಿ ಹಚ್ಚಿದ ಕಾರಣ ಮತದಾನ ಸ್ವಲ್ಪ ಹೊತ್ತು ನಿಧಾನಗತಿಯಲ್ಲಿ ನಡೆಯಿತು.  ಮಾಜಿ ಪ್ರಧಾನಿ ದೇವೇಗೌಡ ಮತ್ತು ಅವರ ಕುಟುಂಬ ಸದಸ್ಯರು, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಐಟಿ ದಿಗ್ಗಜ ನಾರಾಯಣಮೂರ್ತಿ ಮತ್ತು ಅವರ ಪತ್ನಿ ರಾಜ್ಯಸಭೆ ಸದಸ್ಯೆ ಸುಧಾ ಮೂರ್ತಿ, ಕ್ರಿಕೆಟ್ ಆಟಗಾರರಾದ ರಾಹುಲ್ ದ್ರಾವಿಡ್ ಮತ್ತು ಅನಿಲ್ ಕುಂಬ್ಳೆ ಚಲನಚಿತ್ರ ಕಲಾವಿದರಾದ ಪ್ರಕಾಶ್‌ರಾಜ್, ಗಣೇಶ್, ರಾಘವೇಂದ್ರ ರಾಜಕುಮಾರ್ ಮತ್ತು ಅವರ ಕುಟುಂಬ ಸದಸ್ಯರು ಇಂದು ಬೆಳಿಗ್ಗೆ ಮತದಾನ ಮಾಡಿದ ಪ್ರಮುಖರಲ್ಲಿ ಸೇರಿದ್ದಾರೆ. ೯೪ ವರ್ಷದ ಮಾಜಿ ಯೋಧ ಏರ್ ಮಾರ್ಷಲ್ ಪಿ.ವಿ. ಅಯ್ಯರ್ ಇಂದು ಬೆಳಿಗ್ಗೆ ಗಾಲಿ ಕುರ್ಚಿಯಲ್ಲಿ ಮತಗಟ್ಟೆಗೆ ಬಂದು ತಮ್ಮ ಅಮೂಲ್ಯ ಹಕ್ಕನ್ನು ಚಲಾಯಿಸುವ ಮೂಲಕ ಇತರರಿಗೆ ಪ್ರೇರಣೆಯಾದರು. ಬೆಂಗಳೂರಿನಲ್ಲಿ ಕೆಲವು ಹೊಟೇಲ್‌ಗಳು ಮತದಾನ ಮಾಡಿರುವ ಕುರುಹಾದ ಮಸಿ ಹಚ್ಚಿದ ಬೆರಳು ತೋರಿಸಿದವರಿಗೆ ಉಚಿತವಾಗಿ ಅಥವಾ ರಿಯಾಯಿತಿ ದರಗಳಲ್ಲಿ ತಿಂಡಿ ತಿನಿಸು ಸರಬರಾಜು ಮಾಡುವ ಮೂಲಕ ವಿಶಿಷ್ಟ ರೀತಿಯಲ್ಲಿ ಮತದಾರರನ್ನು ಪ್ರೋತ್ಸಾಹಿಸುತ್ತಿವೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

*******ಧ್ವನಿ****ಸುಧೀಂದ್ರ (೧೨.೫೩**

ಇಂದು ನಡೆಯುತ್ತಿರುವ ಚುನಾವಣೆಯಲ್ಲಿ ಮೊದಲ ಬಾರಿಗೆ ಮತಚಲಾಯಿಸುತ್ತಿರುವ ಯುವ ಮತದಾರರು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆ ಲಿಂಗದಳ್ಳಿ ಮತಗಟ್ಟೆಯಲ್ಲಿ ಮತಚಲಾಯಿಸಿದ ಉಷಾ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

**ಧ್ವನಿ: ಉಷಾ**

**<><*<><>*><>**

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ೦೮ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಶಾಂತಿಯುತ ಮತದಾನ ನಡೆಯುತ್ತಿದ್ದು, ಚಿಕ್ಕಬಳ್ಳಾಪುರ ತಾಲ್ಲೂಕಿನ  ಕುಪ್ಪಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಸ್ಥಾಪಿಸಲಾಗಿದ್ದ ಮತಗಟ್ಟೆಯನ್ನು ಪ್ರವಾಸೋದ್ಯಮ ಧ್ಯೇಯ ಮಾದರಿ ಮತಗಟ್ಟೆಯನ್ನಾಗಿ ಮಾಡಿದ್ದು ವಿಶೇಷವಾಗಿ ಗಮನ ಸೆಳೆಯಿತು. ನಂದಿಬೆಟ್ಟ, ವಿಧುರಾಶ್ವತ್ಥ, ಕೈವಾರ, ಗುಮ್ಮನಾಯಕನಪಾಳ್ಯ ಕೋಟೆ,ಮುರಗಮಲ್ಲಾ, ರಂಗಸ್ಥಳ, ತಲಕಾಯಲಬೆಟ್ಟ ಮತ್ತಿತರ ಪ್ರವಾಸಿತಾಣಗಳ ಕುರಿತು ಚಿತ್ರಸಹಿತ ಮಾಹಿತಿ ವಿವರಗಳನ್ನು ನೀಡುವ ಫ್ಲೆಕ್ಸ್ ಬ್ಯಾನರ್ ಗಳು ಮತದಾರರನ್ನು ಸ್ವಾಗತಿಸಿದವು.

*********

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಚುರುಕಿನಿಂದ ಹಾಗೂ ಶಾಂತಿಯುತವಾಗಿ ಮತದಾನ ನಡೆಯುತ್ತಿದ್ದು, ಮಂಡ್ಯ ನಗರದ ಬನ್ನೂರು ಬಡಾವಣೆಯ ಸರ್ಕಾರಿ ಪ್ರಾಥಮಿಕ ಶಾಲೆಯ ಮತಕೇಂದ್ರದಲ್ಲಿ ಮೊದಲ ಬಾರಿಗೆ ಮತದಾನ ಮಾಡಿದ ಇಂಜಿನಿಯರಿಂಗ್ ವಿದ್ಯಾರ್ಥಿನಿ ಪ್ರಾಚಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಆಡಿಯೋ ಬೈಟ್: ಪ್ರಾಚಿ,

*****

ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಶಾಂತಿಯುತವಾಗಿ ಮತದಾನ ನಡೆಯುತ್ತಿದೆ.

****

ಚಿಕ್ಕಮಗಳೂರು ಜಿಲ್ಲೆಯ ೧೨೨೯ ಮತಗಟ್ಟೆಗಳಲ್ಲಿ ಮತದಾನ ನಡೆಯುತ್ತಿದೆ. ಜಿಲ್ಲೆಯ ಶೃಂಗೇರಿ, ಮೂಡಿಗೆರೆ, ಚಿಕ್ಕಮಗಳೂರು, ತರೀಕೆರೆ ವಿಧಾನಸಭಾ ಕ್ಷೇತ್ರಗಳು ಉಡುಪಿ - ಚಿಕ್ಕಮಗಳೂರಿಗೆ, ಜಿಲ್ಲೆಯ ಕಡೂರು ವಿಧಾನ ಸಭಾ ಕ್ಷೇತ್ರವು ಹಾಸನ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದ್ದು ಮೊದಲ ಬಾರಿ ಮತಹಾಕುತ್ತಿರುವ ಯುವ ಮತದಾರರು, ವಯೋವೃದ್ಧ ಮತದಾರರು ಮತಗಟ್ಟೆಗಳೀಗೆ ತೆರಳಿ ಮತದಾನ ಮಾಡುತ್ತಿದ ದೃಶ್ಯ ಕಂಡುಬಂದಿದೆ.

**<><*<><>*><>**

ದೇಶದಲ್ಲಿ ಚುನಾವಣೆಗಳಲ್ಲಿ ಬಳಸುತ್ತಿರುವ ಇವಿಎಂ ಅಂದರೆ, ವಿದ್ಯುನ್ಮಾನ ಮತಯಂತ್ರಗಳಲ್ಲಿ ದಾಖಲಾಗುವ ಪ್ರತಿಯೊಂದು ಮತವನ್ನೂ ವಿವಿಪ್ಯಾಟ್ ಚೀಟಿಗಳೊಂದಿಗೆ ೧೦೦ಕ್ಕೆ ೧೦೦ರಷ್ಟು ಪರಿಶೀಲಿಸಬೇಕೆಂದು ಕೋರಿ ಸಲ್ಲಿಸಲಾಗಿದ್ದ ಮನವಿಯನ್ನು ಸುಪ್ರೀಂಕೋರ್ಟ್ ಇಂದು ವಜಾಗೊಳಿಸಿತು.

ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ದೀಪಂಕರ್ ದತ್ತಾ ಅವರನ್ನೊಳಗೊಂಡ ಪೀಠ ಈ ಮಹತ್ವದ ತೀರ್ಪನ್ನು ನೀಡಿದೆ. ಚುನಾವಣಾ ಆಯೋಗ ಒದಗಿಸಿರುವ ತಾಂತ್ರಿಕ ಸ್ಪಷ್ಟೀಕರಣಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ನಂತರ ಈ ಆದೇಶ ನೀಡುತ್ತಿರುವುದಾಗಿ ನ್ಯಾಯಪೀಠ ತಿಳಿಸಿತು.

ಮತದಾನಕ್ಕೆ ಮತ ಚೀಟಿಗಳನ್ನು ಬಳಸುವ ಈ ಮೊದಲಿನ ಪದ್ಧತಿಗೇ ಹಿಂತಿರುಗಬೇಕು; ಇವಿಎಂ-ವಿವಿಪ್ಯಾಟ್ ನಡುವೆ ಸಂಪೂರ್ಣ ಪರಿಶೀಲನೆಗೆ ಅವಕಾಶ ಕಲ್ಪಿಸಬೇಕು ಹಾಗೂ ಪ್ರತಿಯೊಬ್ಬ ಮತದಾರರಿಗೂ ತಮ್ಮ ಮತದಾನದ ವಿವರ ಇರುವ ವಿವಿಪ್ಯಾಟ್ ಚೀಟಿಗಳನ್ನು ನೀಡುವ ವ್ಯವಸ್ಥೆಯಾಗಬೇಕೆಂದು ಸಲ್ಲಿಸಲಾಗಿದ್ದ ಮನವಿಗಳನ್ನು ಸಹ ವಜಾಗೊಳಿಸಿರುವುದಾಗಿ ನ್ಯಾಯಮೂರ್ತಿ ಖನ್ನಾ ತೀರ್ಪಿನಲ್ಲಿ ವಿವರಿಸಿದ್ದಾರೆ.

ಪ್ರತಿ ಮತಕ್ಷೇತ್ರದ ಮೆಮೊರಿ ಸೆಮಿ ಕಂಟ್ರೋಲರ್‌ನ ಘಟಕವನ್ನು ಮತಯಂತ್ರದ ತಯಾರಿಕಾ ಇಂಜಿನಿಯರ್‌ಗಳು ಪರಿಶೀಲಿಸಿ ಇಡಬೇಕು. ಚುನಾವಣಾ ಫಲಿತಾಂಶ ಪ್ರಕಟಗೊಂಡ ೭ ದಿನಗಳ ಒಳಗೆ ಫಲಿತಾಂಶವನ್ನು ಪ್ರಶ್ನಿಸಿ, ಎರಡನೇ ಹಾಗೂ ಮೂರನೇ ಅಭ್ಯರ್ಥಿ ಮನವಿ ಮಾಡಿದಲ್ಲಿ ಶುಲ್ಕದೊಂದಿಗೆ ಘಟಕದ ಮಾಹಿತಿಯನ್ನು ಒದಗಿಸಬಹುದಾಗಿದೆ ಎಂದು ಸುಪ್ರೀಕೋರ್ಟ್ ಚುನಾವಣಾ ಆಯೋಗಕ್ಕೆ ತಿಳಿಸಿದೆ.

**<><*<><>*><>**

ರಾಜ್ಯದ ಒಳನಾಡು ಜಿಲ್ಲೆಗಳು ಸೇರಿದಂತೆ ದೇಶದ ಪೂರ್ವ ರಾಜ್ಯಗಳು ಹಾಗೂ ದಕ್ಷಿಣಪ್ರಸ್ತ ಭೂಮಿ ಪ್ರದೇಶದಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ತೀವ್ರ ಬಿಸಿಗಾಳಿಯ ಪರಿಸ್ಥಿತಿ ಮತ್ತಷ್ಟು ಹೆಚ್ಚಾಗಲಿರುವುದಾಗಿ ಭಾರತ ಹವಾಮಾನ ಇಲಾಖೆ

ಮುನ್ಸೂಚನೆ ನೀಡಿದೆ. ರಾಜ್ಯದ ಒಳನಾಡು ಜಿಲ್ಲೆಗಳಲ್ಲಿ ಈ ತಿಂಗಳ ೩೦ನೇ ತಾರೀಕಿನವರೆಗೂ ಬಿಸಿ ಗಾಳಿಯ ತೀವ್ರತೆ ಅಧಿಕವಾಗಿರುತ್ತದೆ. ಕರಾವಳಿ ಜಿಲ್ಲೆಗಳಲ್ಲಿ ಉರಿಬಿಸಿಲು ಮತ್ತು ಧಗೆಯ ಪರಿಸ್ಥಿತಿ ಗರಿಷ್ಠ ಮಟ್ಟದಲ್ಲಿ ಇರಲಿದೆ ಎಂದು ಮಾಹಿತಿ ನೀಡಲಾಗಿದೆ.

**<><*<><>*><>**

ಐಪಿಎಲ್ ಟಿ-೨೦ ಕ್ರಿಕೆಟ್ ಇಂದು ಕೊಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿರುವ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ಪಂಜಾಬ್ ಕಿಂಗ್ಸ್ ಮುಖಾಮುಖಿಯಾಗಲಿವೆ. ಪಂದ್ಯ ಸಂಜೆ ೭.೩೦ ಕ್ಕೆ ಆರಂಭವಾಗಲಿದೆ. ಹೈದರಾಬಾದ್‌ನಲ್ಲಿ ನಿನ್ನೆ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ರಾಯಲ್ ಚಾಲೆಂಜರ್ಸ್ ತಂಡ ೩೫ ರನ್‌ಗಳ ಜಯ ದಾಖಲಿಸಿದೆ.

**<><*<> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಸಂಜೆ ೬.೪೦ ಕ್ಕೆ <>*><>**